## 9. ಮನೆ ಹೊರಗೆ ಮಾಸ್ಕ್ ಕಡ್ಡಾಯ

ಅಪರಿಚಿತರೊಂದಿಗೆ ವ್ಯವಹರಿಸುವಾಗ ಹಾಗೂ ಸಾರ್ವಜನಿಕ ಸ್ಥಳಗಳಿಗೆ ತೆರಳುವಾಗ ಮುಖಗವುಸು ಧರಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ. ಸೋಂಕಿನಿಂದ ಅಂತರ ಕಾಯ್ದುಕೊಳ್ಳಲು ಮುಖಗವುಸನ್ನು ಹಾಕಿಕೊಳ್ಳುವಂತೆ ತಿಳಿಸಿದೆ. ಅಗತ್ಯ ವಸ್ತುಗಳ ಖರೀದಿಗೆ ತೆರಳುವ ವೇಳೆ ಕಛೇರಿ ಕೆಲಸಗಳಲ್ಲಿ ನಿರತವಾಗಿರುವಾಗ ಮುಖಗವುಸನ್ನು ಧರಿಸಬೇಕು. ಕೊರೋನಾ ಸೋಂಕಿತರೊಂದಿಗೆ ಗೊತ್ತಿಲ್ಲದೆಯೇ ಸಂಪರ್ಕ ಸಾಧಿಸುವ ಸಾಧ್ಯತೆಯಿರುವ ಕಾರಣ ಮಾಸ್ಕ್ ಧರಿಸುವುದು ಸೂಕ್ತ ಹಾಗೂ ವಯಸ್ಕರು ಧರಿಸುವ ಮಾಸ್ಕ್ 7x9 ಇಂಚು ಮತ್ತು ಮಕ್ಕಳು ಧರಿಸುವ ಮಾಸ್ಕ್ 5x7 ಇಂಚು ಇರಬೇಕು. ಬಳಸದೇ ಇರುವ ಬನಿಯನ್, ಟೀ ಶರ್ಟ್ ಅಥವಾ ಕರವಸ್ತ್ರದಂತಹ ಹತ್ತಿ ಬಟ್ಟೆಯಿಂದ ಮನೆಯಲ್ಲಿಯೇ ಸಿದ್ಧಪಡಿಸುವ ಮಾಸ್ಕ್‌ಗಳನ್ನು ಶುಚಿಗೊಳಿಸಿ ಮರುಬಳಕೆ ಮಾಡಬಹುದಾಗಿದೆ.

ನಗರ ಪ್ರದೇಶಗಳಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೋಂಕು ಪತ್ತೆಗೆ ಶೇ.50ರಷ್ಟು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಫೀವರ್ ಕ್ಲಿನಿಕ್ ಆಗಿ ಬದಲಿಸಲು, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳನ್ನು ಏಪ್ರಿಲ್ 11ರೊಳಗೆ ಫೀವರ್ ಕ್ಲಿನಿಕ್ ಆಗಿ ಮಾರ್ಪಡಿಸಲು ಜಿಲ್ಲೆಯ ವಿಪತ್ತು ನಿರ್ವಹಣಾ ಅನುದಾನ ಬಳಸಿಕೊಂಡು ಥರ್ಮಲ್ ಸ್ಕ್ಯಾನರ್, ಎನ್-95 ಮಾಸ್ಕ್, ಸ್ಯಾನಿಟೈಸರ್, ಸುರಕ್ಷಾ ಕವಚಗಳನ್ನು ಕ್ಲಿನಿಕ್‌ಗಳಿಗೆ ಒದಗಿಸಲು ಹಾಗೂ ಪ್ರತಿದಿನ ವೈದ್ಯಕೀಯ ತ್ಯಾಜ್ಯವನ್ನು ನಿಯಮದಂತೆ ವಿಲೇವಾರಿ ಮಾಡಲು ಹಾಗೂ ಆಪ್ತ ಸಮಾಲೋಚನೆ ಸೇವೆಯನ್ನು ನೀಡಲು ಮತ್ತು ಖಾಸಗಿ ಕ್ಲಿನಿಕ್, ಆಸ್ಪತ್ರೆಗಳು ಕೂಡ ಫೀವರ್ ಕ್ಲಿನಿಕ್‌ಗಳನ್ನು ಆರಂಭಿಸಬಹುದು. ಕ್ಲಿನಿಕ್ ಆರಂಭಿಸಲು ಖಾಸಗಿಯವರು ಮುಂದೆ ಬಂದರೆ ಅವರಿಗೆ ಅನುಮತಿ, ತರಬೇತಿ ಹಾಗೂ ಉಪಕರಣ, ಸುರಕ್ಷಾ ಕವಚವನ್ನು ಅಧಿಕಾರಿಗಳು ಒದಗಿಸಬೇಕೆಂದು ಆರೋಗ್ಯ ಇಲಾಖೆ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:10.04.2020